ಪಕ್ಷದ ಕಾರ್ಯಕರ್ತರ ಸಭೆ, ಕಾರ್ಯಕರ್ತರು ಹಗಲು ಇರುಳು ಕೆಲಸ ಮಾಡಿ

ಎಚ್‌ಡಿಕೆ ಗೆಲ್ಲಿಸುವ ಹೊಣೆ ನಮ್ಮೆಲ್ಲರದು: ಎ.ಮಂಜು

ಸಂ.ಕ. ಸಮಾಚಾರ, ಚನ್ನಪಟ್ಟಣ

ಜೆಡಿಎಸ್ ನೇತಾರ ಎಚ್.ಡಿ. ಕುಮಾರಸ್ವಾಮಿ ಅವರು ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ರಾಜ್ಯ ಪ್ರವಾಸ ಮಾಡಬೇಕಿರುವ ಕಾರಣ, ಇಲ್ಲಿನ ಪ್ರತಿಯೊಬ್ಬ ಕಾರ್ಯಕರ್ತನೂ ತಾವೇ ಸ್ಪರ್ಧಿ ಎಂದು ತಿಳಿದು, ಎಚ್ಡಿಕೆ ಅವರ ಸ್ವಕ್ಷೇತ್ರದಲ್ಲಿ ಅತ್ಯಧಿಕ ಮತಗಳಿಂದ ಗೆಲ್ಲಿಸಿಕೊಳ್ಳಬೇಕಾದ ಹೊಣೆಗಾರಿಕೆ ನಮ್ಮ–ನಿಮ್ಮೆಲ್ಲರ ಮೇಲಿದೆ ಎಂದು ರಾಮನಗರ ಜಿಲ್ಲಾ ಜೆಡಿಎಸ್ ಅಧ್ಯಕ್ಷ, ಮಾಗಡಿ ಶಾಸಕ ಎ.ಮಂಜುನಾಥ್ ಅವರು ಕರೆ ನೀಡಿದರು.

ತಾಲ್ಲೂಕಿನ ಕೂಡ್ಲೂರು– ಗರಕಹಳ್ಳಿ ರಸ್ತೆಯ ಶಿಶಿರ ರೆಸಾರ್ಟ್‌ನಲ್ಲಿ ಹಮ್ಮಿಕೊಂಡಿದ್ದ ಚನ್ನಪಟ್ಟಣ ನಗರ ಜೆಡಿಎಸ್ ಕಾರ್ಯಕರ್ತರ ಸಭೆಯಲ್ಲಿ ಅವರು ಮಾತನಾಡಿದರು.

ಕುಮಾರಸ್ವಾಮಿ ಅವರು ರಾಜ್ಯಾದ್ಯಂತ ಸಂಚರಿಸಿ ಪಕ್ಷವು ರಾಜ್ಯದ ಚುಕ್ಕಾಣಿ ಹಿಡಿಯಲು ಅಣಿಗೊಳಿಸುವ ಕಾರ್ಯ ನಿರತರಾಗುವ ಕಾರಣ, ರಾಮನಗರ ಜಿಲ್ಲಾ ಜೆಡಿಎಸ್, ಚನ್ನಪಟ್ಟಣ ತಾಲ್ಲೂಕಿನ ಎಲ್ಲಾ ಮುಂಚೂಣಿ ಘಟಕಗಳ ಜೆಡಿಎಸ್ ಪದಾಧಿಕಾರಿಗಳು ಇನ್ನೆರಡು ತಿಂಗಳು ಹಗಲು–ಇರುಳು ಎನ್ನದೇ ಈ ಬಾರಿ ನಿರ್ಣಾಯಕವಾದ ಚುನಾವಣೆಯಲ್ಲಿ ಸ್ವಕ್ಷೇತ್ರದಲ್ಲಿ ಕುಮಾರಸ್ವಾಮಿ ಅವರನ್ನು ಗೆಲ್ಲಿಸಲು ಸಂಕಲ್ಪ ಮಾಡಬೇಕು ಎಂದರು.

ಮಳೂರು ಪುಟ್ಟಸ್ವಾಮಿಗೌಡರ ಮೊಮ್ಮಗ ಅಜಯ್ ಕುಮಾರ್ ಅವರಿಗೆ ಪಕ್ಷದ ಬಾವುಟ ಹಾಗೂ ಆದೇಶ ಪತ್ರ ನೀಡುವ ಮುಖೇನ ನೆರೆದಿದ್ದ ನಗರ ಜೆಡಿಎಸ್ ಕಾರ್ಯಕರ್ತರ ಎದುರು ಸರ್ವರ ಸಂಪೂರ್ಣ ಸಹಮತದೊಂದಿಗೆ ಚನ್ನಪಟ್ಟಣ ನಗರ ಜೆಡಿಎಸ್ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗುತ್ತಿದೆ ಎಂದು ಘೋಷಿಸಿದರು.

ಚನ್ನಪಟ್ಟಣ ಜೆಡಿಎಸ್ ನಗರ ಘಟಕದ ನೂತನ ಅಧ್ಯಕ್ಷ ಮಳೂರು ಅಜಯ್ ಕುಮಾರ್ ಅವರನ್ನು ಮುಖಂಡರು ಅಭಿನಂದಿಸಿದರು.

ಅಜಯ್‌ಕುಮಾರ್‌ಗೆ ಜವಾಬ್ದಾರಿ

ಅನೇಕ ವರ್ಷಗಳಿಂದ ತಾಲ್ಲೂಕು ಹಾಗೂ ಪಟ್ಟಣ ಪ್ರದೇಶದಲ್ಲಿ ಜೆಡಿಎಸ್ ಸಂಘಟನೆಗೆ ಕಾಯಾ ವಾಚಾ ಮನಸಾ ಹೆಗಲು ನೀಡಿದ್ದ ಮಳೂರು ಪುಟ್ಟಸ್ವಾಮಿಗೌಡರ ಮೊಮ್ಮಗ ಅಜಯ್ ಕುಮಾರ್ ಅವರಿಗೆ ನಗರ ಜೆಡಿಎಸ್ ಸಂಘಟನೆಯ ಜವಾಬ್ದಾರಿಯನ್ನು ಕುಮಾರಸ್ವಾಮಿ ಹಾಗೂ ಸ್ಥಳೀಯ ಹಿರಿಯ ಮುಖಂಡರು ವಹಿಸಿದ್ದಾರೆ.

ಮಾಜಿ ಶಾಸಕ ಎಂ.ಸಿ.ಅಶ್ವಥ್, ಹಿರಿಯ ಮುಖಂಡರಾದ ಹಾಪ್ ಕಾಮ್ಸ್ ಸಿ. ದೇವರಾಜು, ಎಂ.ಸಿ.ಕರಿಯಪ್ಪ, ವಡ್ಡರಹಳ್ಳಿ ರಾಜಣ್ಣ, ಪ್ರಕಾಶ್, ರಘು ಕುಮಾರ್, ಪಿಎಲ್ ಡಿ ಬ್ಯಾಂಕ್ ಅಧ್ಯಕ್ಷ ಬೈರನರಸಿಂಹಯ್ಯ, ಮಾಜಿ ಅಧ್ಯಕ್ಷರಾದ ಗೋವಿಂದಹಳ್ಳಿ ನಾಗರಾಜು, ಮಾಗನೂರು ಗಂಗರಾಜು ಸೇರಿದಂತೆ ಅನೇಕ ಪ್ರಮುಖರು ಉಪಸ್ಥಿತರಿದ್ದರು.

ಮರಳವಾಡಿ ಗ್ರಾಮಕ್ಕೆ ಪ್ರಜಾಧ್ವನಿ ಯಾತ್ರೆ 11ಕ್ಕೆ

ಮರಳವಾಡಿ: ರಾಜ್ಯದಾದ್ಯಂತ ಅಡಿಯಲ್ಲಿರುವ ಕಾಂಗ್ರೆಸ್ ಲಕ್ಷದ ಪ್ರಜಾಧ್ವನಿ ಯಾತ್ರೆಯು ಮಾ, 11 ರಂದು ಶನಿವಾರ ಮರಳವಾಡಿ ಗ್ರಾಮಕ್ಕೆ ಆಗಮಿಸಲಿದೆ, ಯಶಸ್ವಿಗೆ ಪಕ್ಷದ ಕಾರ್ಯಕರ್ತ ಮುಖಂಡರು ಯಶಸ್ವಿಗೊಳಿಸಬೇಕೆಂದು ಜಿ.ಪಂ, ಮಾಜಿ ಅಧ್ಯಕ್ಷ ಇಕ್ಬಾಲ್ ಹುಸೇನ್ ಕರೆ ನೀಡಿದರು.

ಬ್ಲಾಕ್ ಅಧ್ಯಕ್ಷ ಸಬ್ದರ್ ಹುಸೇನ್ ನಿವಾಸದಲ್ಲಿ ಧ್ವನಿಯಾತ್ರೆಗೆ ಪೂರ್ವ ಸಿದ್ಧತಾಸಭೆಯ ಭಾಗವಹಿಸಿ ಮಾತನಾಡಿದರು. ಮುಂದೆ ನಡೆಯಲ್ಲಿರುವ ರಾಮನಗರ ವಿಧಾನ ಸಭಾ ಕ್ಷೇತ್ರದಲ್ಲಿ ಪಕ್ಷಕ್ಕೆ ಒಳ್ಳೆಯ ಭವಿಷ್ಯವಿದೆ ಎಂದರು.ಕೀರಣಗೆರೆ ಜಗದೀಶ್ ಮಾತನಾಡಿ ಕಾಂಗ್ರೆಸ್ ಪಕ್ಷ ಒಂದು ಜಾತಿ, ವರ್ಗದ ಮೇಲೆ ಪಕ್ಷ ಕಟ್ಟಿ ಅಧಿಕಾರ ಮಾಡಲು ಸಾಧ್ಯವಿಲ್ಲ, ಎಲ್ಲಾ ಜಾತಿಯ ಎಲ್ಲಾ ಧರ್ಮದ ಜನರನ್ನು ಸೇರಿಸಿಕೊಂಡು ಪಕ್ಷ ಬೆಳೆದಿದೆ ಎಂದರು. ಗ್ರಾ.ಪಂ, ಅಧ್ಯಕ್ಷ ಎಂ.ಕೆ.ಶಿವಶಂಕರ್ ಜಿ.ಪಂ,ಮಾಜಿ ಅಧ್ಯಕ್ಷ ಎಂ.ಎನ್, ನಾಗರಾಜು ಬ್ಲಾಕ್ ಅಧ್ಯಕ್ಷ ಸಬ್ದರ್ ಹುಸೇನ್ ಮುಖಂಡರಾದ ಈಶ್ವರ, ರವಿ, ವಿಶ್ವಪ್ರಿಯಾ, ತೋಕಸಂದ್ರ ಕುಮಾರ್, ಯಲಜವಾಡಿ ಗ್ರಾ.ಪಂ ಉಮೇಶ್, ಉಪಾಧ್ಯಕ್ಷ ಚಂದ್ರಪ್ಪ, ಸುಜಾತ್, ಹಲವರು ಭಾಗವಹಿಸಿದರು.

20 ವರ್ಷದಿಂದ ಮಾಡಿರುವ ಕೆಲಸಕ್ಕೆ ಕೂಲಿ ಕೊಡಿ: ಸಿಪಿವೈ

ಸಂ.ಕ. ಸಮಾಚಾರ, ಚನ್ನಪಟ್ಟಣ

"ನಾನು ನಿಮ್ಮ ಮನೆಯ ಮಗ, ನಾನು ತಪ್ಪು ಮಾಡಿದರೆ ಬಯ್ಯುವ, ಹೊಡೆಯುವ, ಏನೇ ಶಿಕ್ಷೆ ಕೊಡುವ ಹಕ್ಕು ನಿಮಗಿದೆ.'

ಹೀಗೆಂದು ಮಾಜಿ ಸಚಿವ, ವಿಧಾನ ಪರಿಷತ್ ಸದಸ್ಯ ಸಿ.ಪಿ.ಯೋಗೇಶ್ವರ್ ಭಾವೋದ್ವೇಗಕ್ಕೆ ಒಳಗಾಗಿ ಮತದಾರರ ಮುಂದೆ

ಪರಿ ಪರಿಯಾಗಿ ಬೇಡಿಕೊಂಡರು. ತಾಲ್ಲೂಕಿನ ನಾಗವಾರ ಗ್ರಾಮದಲ್ಲಿ ಸ್ವಾಭಿಮಾನಿ ಸಂಕಲ್ಪ ನಡಿಗೆಯ ಸಂದರ್ಭದಲ್ಲಿ ಗ್ರಾಮದ ಜನತೆ ಸೇರಿಕೊಂಡು ಆಯೋಜನೆ ಮಾಡಲಾಗಿದ್ದ ಹೆಲಿಕ್ಯಾಪ್ಟರ್ ಮೂಲಕ ಟನ್‌ಗಟ್ಟಲೇ ಗುಲಾಬಿ ಹೂಮಳೆ ಸುರಿಸಿದ್ದನ್ನು ಕಂಡು ಮೂಕವಿಸ್ಮಿತರಾಗಿ ನಂತರ ಅವರ ಅಭಿಮಾನದ ಕಟ್ಟೆ ಹೊಡೆದು, ತಮ್ಮಲ್ಲಿರುವ ನೋವನ್ನು ಹೊರಹಾಕಿದರು.

ಮನೆ ಮಗ ತಪ್ಪು ಮಾಡಿದರೆ ಅವನನ್ನು ದೂರ ತಳ್ಳುವಿರೋ ಎಲ್ಲೋ ಇದ್ದವರು ಈ ಕ್ಷೇತ್ರಕ್ಕೆ ಸಂಬಂಧವೇ ಇಲ್ಲದವರು ಕುಮಾರಸ್ವಾಮಿಯ ಪೊಳ್ಳು ಭರವಸೆಗಳನ್ನು ನಂಬಿ ಅವರನ್ನು ಗೆಲ್ಲಿಸಿದ್ದಿರಿ ಎಂದರು. ಬಮೂಲ್ ನಾಮಿನಿ ನಿರ್ದೇಶಕ ಎಸ್.ಲಿಂಗೇಶ್ ಕುಮಾರ್, ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ಹರೂರು ರಾಜಣ್ಣ,ಚನ್ನಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಂಪುರ ಮಲವೇಗೌಡ.ನಗರ ಬಿಜೆಪಿ ಘಟಕದ ಅಧ್ಯಕ್ಷ ಶಿವು ಹಾಗೂ ನಾಗವಾರದ ಬಿಜೆಪಿ ಮುಖಂಡರು, ಕಾರ್ಯಕರ್ತರು ಉಪಸ್ಥಿತರಿದ್ದರು.

ಬಲ್ಲಾಪಟ್ಟಣ ಹಾಲಿನ ಡೇರಿಗೆ ಪುಟ್ಟಲಿಂಗಮ್ಮ ಸಾರಥ್ಯ

ಸಂ.ಕ. ಸಮಾಚಾರ ಚನ್ನಪಟ್ಟಣ

ತಾಲ್ಲೂಕಿನ ಬಲ್ಲಾಪಟ್ಟಣ ಡೇರಿ ನೂತನ ಅಧ್ಯಕ್ಷರಾಗಿ ಪುಟ್ಟಲಿಂಗಮ್ಮ ಕೆಂಪೇಗೌಡ ಅವರು ಚುನಾವಣೆ ಮೂಲಕ ಆಯ್ಕೆಯಾದರೆ, ಉಪಾಧ್ಯಕ್ಷರಾಗಿ ವಿಷಕಂಠ ಅವರು ಅವಿರೋಧವಾಗಿ ಆಯ್ಕೆಯಾದರು.

ಡೇರಿಯ ಅಧ್ಯಕ್ಷಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಶುಕ್ರವಾರ ನಿಗದಿಯಾಗಿದ್ದ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಪುಟ್ಟಲಿಂಗಮ್ಮ ಕೆಂಚೇಗೌಡ ಹಾಗೂ ಎನ್.ಶಿವರುದ್ರಯ್ಯ ಉಮೇದುವಾರಿಕೆ ಸಲ್ಲಿಸಿದ್ದರು. ಡೇರಿಯ ಹನ್ನೆರಡು ನಿರ್ದೇಶಕರ ಪೈಕಿ ಪುಟ್ಟಲಿಂಗಮ್ಮ ಅವರಿಗೆ ಹತ್ತು ಮತ ಹಾಗೂ ಶಿವರುದ್ರಯ್ಯ ಅವರಿಗೆ ಎರಡು ಮತ ಲಭಿಸಿದ ಕಾರಣ ಎದುರಾಳಿಗಿಂತ ಅತಿ ಹೆಚ್ಚು ಮತ ಪಡೆದ ಪುಟ್ಟಲಿಂಗಮ್ಮ ಅವರು ಆಯ್ಕೆಯಾದರು.



ಬಲ್ಲಾಪಟ್ಟಣ ಡೇರಿ ನೂತನ ಅಧ್ಯಕ್ಷೆ ಪುಟ್ಟಲಿಂಗಮ್ಮ ಹಾಗೂ ಉಪಾಧ್ಯಕ್ಷ ವಿಷಕಂಠ ಅವರನ್ನು ಗ್ರಾಮದ ಪ್ರಮುಖರು ಅಭಿನಂದಿಸಿದರು.

ಡೇರಿ ನಿರ್ದೇಶಕರಾದ ಬಿ.ಎನ್.ಲಿಂಗೇಗೌಡ, ಕೆಂಪೇಗೌಡ, ತಿರುಮಲ್ಲೇಗೌಡ, ಶಿವಬೀರಯ್ಯ, ಕಾಳಬೀರಯ್ಯ, ಕಾವೇರಿಗೌಡ, ದೊಡ್ಡಬೋರಯ್ಯ ಹಾಗೂ ಗೌರಮ್ಮ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗಿಯಾಗಿದ್ದರು. ಡೇರಿ ಸಿಇಒ ಬಿ.ಕೆ.ರಮೇಶ್ ಹಾಗೂ ಸಿಬ್ಬಂದಿ ಸುಗಮ ಚುನಾವಣೆಗೆ ನೆರವಾದರು. ಗ್ರಾಮದ ಪ್ರಮುಖರು ಹಾಗೂ ಯುವ ಮುಖಂಡ ಬಿ.ಕೆ.ವಿನಯ್ ಡೇರಿಯ ನೂತನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ಅಭಿನಂದಿಸಿದರು.

ಅಂಗನವಾಡಿ ಮಕ್ಕಳಿಗೆ ಚೇರ್ ವಿತರಣೆ

ಮಾಗಡಿ: ತಾಲೂಕಿನ ನೇತೇನಹಳ್ಳಿ ಗ್ರಾಮ ಪಂಚಾಯಿತಿ ವತಿಯಿಂದ 12 ಅಂಗನವಾಡಿಗಳಿಗೆ ಉಚಿತ ಚೇರ್ ಗಳನ್ನು ಗ್ರಾ.ಪಂ. ಅಧ್ಯಕ್ಷ ಪುರುಷೋತ್ತಮ್ ವಿತರಣೆ ಮಾಡಿದರು.

15 ನೇ ಹಣಕಾಸು ಯೋಜನೆ ಅಡಿ 90 ಸಾವಿರ ವೆಚ್ಚದಲ್ಲಿ 150 ಚೇರ್ ಗಳನ್ನು ಮಕ್ಕಳಿಗೆ ಹಂಚಲಾಗಿದೆ ಎಂದರು.

ನೇತೇನಹಳ್ಳಿ ಗ್ರಾಮದಲ್ಲಿ ಶಿಥಿಲಾವಸ್ಥೆಯಲ್ಲಿದ್ದ ಆಸ್ಪತ್ರೆ ಕಟ್ಟಡಕ್ಕೆ ಜಿಲ್ಲಾ ಪಂಚಾಯಿತಿ ಅನುದಾನ ಹಾಗೂ ಶಾಸಕರ ಅನುದಾನದ ಅಡಿ 18 ಲಕ್ಷ 50 ಸಾವಿರ ರೂ. ವೆಚ್ಚದಲ್ಲಿ ಸುಸಜ್ಜಿತ ಆಸ್ಪತ್ರೆ ಕಟ್ಟಡ ಕಟ್ಟಿಸಲಾಗುತ್ತಿದೆ ಎಂದರು. ನಮ್ಮ ಪಂಚಾಯಿತಿ ಮಾದರಿಯಾಗಿ ಮಾಡುವ ನಿಟ್ಟಿನಲ್ಲಿ ಸರ್ಕಾರದ ಯೋಜನೆಯನ್ನು ಬಡವರಿಗೆ ಕೊಡುವ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ ಎಂದು ತಿಳಿಸಿದರು.ಇದೇ ವೇಳೆ ಗ್ರಾಮ ಪಂಚಾಯಿತಿ ಸದಸ್ಯರಾದ ಶಿವಕುಮಾರ್, ಶಿವರುದ್ರಮ್ಮ, ದೀಪ ಶಿವು, ರೂಪ ನಾಗರಾಜು ಸೇರಿದಂತೆ ಅಂಗನವಾಡಿ ಶಿಕ್ಷಕಿಯರು ಭಾಗವಹಿಸಿದ್ದರು.

ರಾಮನಗರ ಜಿಲ್ಲೆ: ಬಿಜೆಪಿ ಯಾತ್ರೆ

ರಾಮನಗರ: ಕೇಂದ್ರ ಹಾಗೂ ರಾಜ್ಯದಲ್ಲಿ ಆಡಳಿತದಲ್ಲಿರುವ ಬಿಜೆಪಿ ಸರ್ಕಾರದ ಸಾಧನೆಗಳನ್ನು ಜನರಿಗೆ ತಿಳಿಸುವ ಸಲುವಾಗಿ ಬಿಜೆಪಿಯ ಮಹತ್ವಾಕಾಂಕ್ಷೆ "ಜಯ ಸಂಕಲ್ಪ ಯಾತ್ರೆ"ಯನ್ನು ಶನಿವಾರ ರಾಮನಗರ ಜಿಲ್ಲೆಯಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಅಶ್ವಥ್ ನಾರಾಯಣಗೌಡ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ನಾಲ್ಕನೆ ತಂಡ ದೇವನಹಳ್ಳಿಯ ಕೆಂಪೇಗೌಡರ ಸ್ಥಳದಲ್ಲಿ ಸಚಿವ ಆರ್.ಅಶೋಕ್ ಅವರು ಚಾಲನೆ ನೀಡಿದ್ದು, ಇದೇ ತಂಡವು ರಾಮನಗರ ಜಿಲ್ಲೆಯಲ್ಲಿ ಸಂಚರಿಸಲಿದೆ. ಶನಿವಾರ ಬೆಳಿಗ್ಗೆ ಚನ್ನಪಟ್ಟಣದ ಮಳೂರಿನ ಅಪ್ರಮೇಯ ಸ್ವಾಮಿ ದೇವಾಲಯದಿಂದ ಜಯ ಸಂಕಲ್ಪ ಯಾತ್ರೆ ಆರಂಭವಾಗಲಿದೆ.

ಮಧ್ಯಾಹ್ನ ರಾಮನಗರದ ಅರ್ಚಕರಹಳ್ಳಿ ಬಳಿಯಿಂದ ಬೈಕ್ ರ್‍ಯಾಲಿ ಜತೆಗೆ ಸಂಕಲ್ಪ ಯಾತ್ರೆ ಪ್ರಾರಂಭವಾಗಲಿದೆ. ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದ ಬಳಿಕ, ಬಿಡದಿ ತಲುಪಲಿದ್ದು ಸಂಜೆ ವೇಳೆಗೆ ಬೃಹತ್ ಸಾರ್ವಜನಿಕ ಸಭೆಯನ್ನು ಆಯೋಜನೆ ಮಾಡಲಾಗಿದೆ ಎಂದು ಹೇಳಿದರು.

ರೇಷ್ಮೆ ಉದ್ಯಮಗಳ ನಿಗಮ ಅಧ್ಯಕ್ಷ ಗೌತಮ್ ಗೌಡ, ಬಿಜೆಪಿ ಜಿಲ್ಲಾಧ್ಯಕ್ಷ ಹುಲುವಾಡಿ ದೇವರಾಜು, ಪ್ರಧಾನ ಕಾರ್ಯದರ್ಶಿ ರುದ್ರದೇವರು, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಶಿವಮಾದು, ಮಾಜಿ ಅಧ್ಯಕ್ಷ ನಾಗರಾಜು, ವಂಡಿಖಂಡರಾದ ಪಿ.ಶಿವಾನಂದ, ಬಿ.ನಾಗೇಶ್, ಚಂದ್ರಶೇಖರ್‌ರೆಡ್ಡಿ, ಚಂದನ್ ಮೋರೆ, ಲೀಲಾವತಿ, ವಿ.ರಾಜು, ಕಾಳಪ್ಪ ಹಾಜರಿದ್ದರು.



ರಾಮನಗರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಅಶ್ವಥ್ ನಾರಾಯಣಗೌಡ ಮಾತನಾಡಿದರು.

ತುಂಬಿದ ಮನೆಗೊಂದು ಚಂದದ ಸಾಪ್ತಾಹಿಕ ಕರ್ಮವೀರ
ತಪ್ಪದೇ ಓದಿ
ಎಲ್ಲ ಬುಕ್‌ಸ್ಟಾಲ್‌ಗಳಲ್ಲಿ ಲಭ್ಯ

ಪೃಥ್ವಿ ಅಸೆಟ್ ರಿಕನ್‌ಸ್ಟ್ರಕ್ಷನ್ ಮತ್ತು ಸೆಕ್ಯೂರಿಟೀಶನ್ ಕಂಪನಿ ಲಿಮಿಟೆಡ್

PARAS

ನೋಂದಣಿ ಮತ್ತು ಕಾರ್ಪೋರೇಟ್ ಕಚೇರಿ: ಡಿ.ನಂ. 1–55, ರಾಜಾ ಪ್ರಸಾದಮ್ಮ, 4ನೇ ಮಹಡಿ, ವಿಂಗ್–1, ಮಸೀದಿ ಬಂದಾ ರಸ್ತೆ, ಕುಂದಾಪುರ, ಹೈದ್ರಾಬಾದ್–500084. CIN: U67120TG2007PLC053327

ದೂರವಾಣಿ: 040–41413333, ಫ್ಯಾಕ್ಸ್: 040–41413301, ಇ–ಮೇಲ್: co@paras.org.in, ವೆಬ್‌ಸೈಟ್: www.paras.org.in

ಮೆ॥ ವಿಕ್ರಮ್ ಹಾಸ್ಪಿಟಲ್ ಪ್ರೈವೇಟ್ ಲಿಮಿಟೆಡ್‌ನ ಸ್ಥಿರ ಆಸ್ತಿಯ ಮಾರಾಟಕ್ಕೆ ಸೀಲ್ ಮಾಡಿದ ಟೆಂಡರ್- ಕಮ್-ಇ- ಹರಾಜುಗಳನ್ನು ಆಹ್ವಾನಿಸುವ ಪ್ರಕಟಣೆ

ಭದ್ರತಾ ಆಸಕ್ತಿ (ಜಾರಿ) ನಿಯಮಗಳು 2002ರ ನಿಯಮ 6(2) ಮತ್ತು ನಿಯಮ 9 (1) ರ ಅಡಿಯಲ್ಲಿ ಮತ್ತು ಭದ್ರತಾ ಆಸಕ್ತಿ (ಜಾರಿ) ನಿಯಮಗಳು 2002 ರ ನಿಯಮ 8 (6) ಗೆ ನಿಬಂಧನೆಯೊಂದಿಗೆ ಓದಿಕೊಡಂತೆ ಮಾರಾಟದ ಸೂಚನೆ - ಮೆ॥ ವಿಕ್ರಂ ಹಾಸ್ಪಿಟಲ್ ಪ್ರೈವೇಟ್ ಲಿಮಿಟೆಡ್.

ಆರ್ಥಿಕ ಸ್ವತ್ತುಗಳ ಭದ್ರತೆ ಮತ್ತು ಜಸರ್ ನಿರ್ಮಾಣ ಮತ್ತು ಭದ್ರತಾ ಬಡ್ಡಿ ಕಾಯ್ದೆ ಜಾರಿ 2002 (ಸರ್ಫೇಸಿ), ಭದ್ರತಾ ಬಡ್ಡಿ (ಜಾರಿ) ನಿಯಮಗಳು 2002ರ ನಿಯಮ 6(2) ಮತ್ತು ನಿಯಮ (6)ರ ನಿಬಂಧನೆಯಡಿ ಓದಿಕೊಂಡಂತೆ ಚರ ಮತ್ತು ಸ್ಥಿರಾಸ್ತಿಗಳ ಮಾರಾಟಕ್ಕಾಗಿ ಇ–ಹರಾಜು ನೋಟಿಸ್.

ಸಾಮಾನ್ಯವಾಗಿ ಸಾರ್ವಜನಿಕರಿಗೆ ಹಾಗೂ ವಿಶೇಷವಾಗಿ ಸಾಲಗಾರರಿಗೆ ಈ ಮೂಲಕ ಸೂಚನೆ ನೀಡುವುದೇನೆಂದರೆ ಸಾಲಗಾರರು, ಅಡಮಾನದಾರರು & ಜಾಮೀನುದಾರರು ಈ ಕೆಳಗೆ ವಿವರಿಸಲಾದ ಚರ ಮತ್ತು ಸ್ಥಿರಾಸ್ತಿಗಳನ್ನು ಭದ್ರತಾ ಸಾಲದಾತರಿಗೆ ಅಡಮಾನ/ಒತ್ತೆ ಇಟ್ಟಿದ್ದಾರೆ. ಈ ಸ್ವತ್ತುಗಳ ಸ್ವಾಧೀನವನ್ನು ಬೆಂಗಳೂರಿನ ಎನ್‌ಸಿಎಲ್‌ಟಿಯಿಂದ ನೇಮಿಸಲಾದ ವೃತ್ತಿಪರ ರೆಸ್ಯೂಲೆಶನ್ಸ್ ಅಧಿಕಾರಿಗಳು ಪಡೆದುಕೊಂಡಿದ್ದಾರೆ. ಭದ್ರತಾ ಸಾಲದಾತ ಪೃಥ್ವಿ ಅಸೆಟ್ ರಿಕನ್‌ಸ್ಟ್ರಕ್ಷನ್ ಮತ್ತು ಸೆಕ್ಯೂರಿಟೀಶನ್ ಕಂಪನಿ ಲಿಮಿಟೆಡ್ (ಪಾರಸ್)ಗೆ ಸಾಲಗಾರರು ಮೆ॥ ವಿಕ್ರಮ್ ಆಸ್ಪತ್ರೆ ಪ್ರೈವೇಟ್ ಲಿಮಿಟೆಡ್, (ದಿವಾಳಿಯಲ್ಲಿರುವ ಕಂಪನಿ), ಬರಬಾಸ್ತುದಾರ & ಜಾಮೀನುದಾರರಿಂದ ಪ್ರತಿನಿಧಿಸಲ್ಪಟ್ಟಿದೆ. ಜಾಮೀನುದಾರರು: 1) ಡಾ. ಎಸ್.ಜಿ. ವಿಕ್ರಮ್, 2) ಡಾ. ಎಸ್ ಭಾಸ್ಕರ್, 3) ಶ್ರೀ ಎಸ್.ಎನ್. ರಾಜೇಶ್ವರ್ ಮತ್ತು 4) ಮೆ॥ ಪ್ರೈಮ್ ಲೈಫ್‌ಲೈನ್ ಹೆಲ್ತ್‌ಕೇರ್ ಪ್ರೈವೇಟ್ ಲಿಮಿಟೆಡ್ ಅವರಿಂದ ಬಾಕಿಯಿರುವ ಮೊತ್ತ ರೂ. 117,76,41,226/- (ಒಂದು ನೂರಾ ಹದಿನೇಳು ಕೋಟಿ ಎಪ್ಪತ್ತಾರು ಲಕ್ಷ ನಾಲ್ವತ್ತೊಂದು ಸಾವಿರ ಎರಡು ನೂರಾ ಇಪ್ಪತ್ತಾರು ಮಾತ್ರ) ದಿನಾಂಕ 31-01-2023 ರಂತೆ ಜೊತೆಗೆ ಹೆಚ್ಚಿನ ಬಡ್ಡಿ, ಶುಲ್ಕ, ಸೇರಿ ವಸೂಲಿಗಾಗಿ ಚರ ಮತ್ತು ಸ್ಥಿರಾಸ್ತಿಯನ್ನು "ಏನಿದೆಯೋ ಹಾಗೇ" ಮತ್ತು "ಎಲ್ಲಿದೆಯೋ ಅಲ್ಲಿ" ಆಧಾರದ ಮೇಲೆ ದಿನಾಂಕ: 12-04-2023 ರಂದು ಮಾರಾಟ ಮಾಡಲಾಗುವುದು.

ಹೆಡ್ಡೂಲ್ ಆಸ್ತಿಯ ಮಾರಾಟವನ್ನು ಸೇವಾ ಪೂರೈಕೆದಾರರ ವೆಬ್‌ಸೈಟ್ : https://www.bankeauctions.com ಮೂಲಕ "ಆನ್‌ಲೈನ್ ಹರಾಜು ಮಾರಾಟ" ವನ್ನು ನಡೆಸಲಾಗುತ್ತದೆ. ಇ–ಹರಾಜಿನ ದಿನಾಂಕ, ಬಿಡ್ ಫಾರ್ಮ್ ಸಲ್ಲಿಸುವ ಕೊನೆಯ ದಿನಾಂಕ, ಮೀಸಲು ಬೆಲೆ, ಮುಂಗಡ ಹಣ ಠೇವಣಿ, ಬಿಡ್ ಹೆಚ್ಚಳದ ಮೊತ್ತ ಮತ್ತು ಇ–ಹರಾಜಿನ ಸಮಯದ ವಿವರಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಹೆಡ್ಡೂಲ್ - ಎ (ಚರ ಆಸ್ತಿಗಳ ವಿವರಣೆ)

ಎಲ್ಲ ಚರ ಸ್ವತ್ತುಗಳು ಅಂದರೆ ವೈದ್ಯಕೀಯ ಪರಿಕರಗಳು, ಕಚೇರಿ ಪೀಠೋಪಕರಣಗಳು ಮತ್ತು ನೆಲೆವಸ್ತುಗಳು, ವಿದ್ಯುತ್ ಉಪಕರಣಗಳು, ವಾಹನಗಳು ಇತ್ಯಾದಿ. ಇವುಗಳು ಆಸ್ತಿ ಡೋರ್ ನಂ. 46, ಹೊಸ ನಂ. 30/1 ಮತು ಡೋರ್ ನಂ. 3044, ಹೊಸ ನಂ. ಡಿ–31, (ಈ ಮೊದಲು ಸಿಐಟಿಬಿ ಸೈಟ್ ನಂ. 47), ವಿವೇಕಾನಂದ ರಸ್ತೆ, ಯಾದವಗಿರಿ, ದೇವರಾಜ ಮೊಹಲ್ಲ, ಮೈಸೂರು – 570020. ಪರಿಕರಗಳ ಮತ್ತು ಇತರ ಸ್ವತ್ತುಗಳ ವಿವರವಾದ ಪಟ್ಟಿಯು ವೆಬ್‌ಸೈಟ್: www.paras.org.inನಲ್ಲಿ ಲಭ್ಯವಿದ